| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

A3 – 2024

ವಿಷಯ ಸಂಕೇತ Subject Code **01**

# ಕನ್ನಡ / KANNADA

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 56) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 56] [Max. Marks : 80

**ಸೂಚನೆ :**

I. ಅ–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **(10 × 1 = 10)**

1) ಮಯತನೂಜೆ ಎಂದರೆ ಯಾರು?

(a) ಸೀತೆ (b) ಮಂಡೋದರಿ

(c) ದ್ರೌಪದಿ (d) ಊರ್ಮಿಳಾ

2) ಯಾವುದರಿಂದ ಪರಿಮಳವನ್ನು ಅರಿಯಬಹುದು?

(a) ಪುಷ್ಪ (b) ಗಂಧ

(c) ಫಲ (d) ಮಣ್ಣು

3) ಅರಸಿ ಬಿಡು ಬಿಡು ಖಾತಿಯನು
ವಿಸ್ತರಿಸಲೇಕೆಮ್ಮಣ್ಣನಾಜ್ಞೆಯ
ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ.

ಈ ಪದ್ಯಭಾಗದಲ್ಲಿ ಭೀಮನ ಮಾತಿನ ಅರ್ಥವೇನು?

(a) ಪ್ರತಿಕಾರದ ಪ್ರತಿಜ್ಞೆ (b) ಭೀಮನ ಕೋಪ

(c) ಭೀಮನ ಅಸಹಾಯಕತೆ (d) ಭೀಮನ ಹುಸಿಕೋಪ

4) ಜಾನಪದ ಗರತಿಯ ಪ್ರಕಾರ ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?

(a) ಅಡಿಕೆ ಮರ (b) ಬೇವಿನ ಮರ

(c) ತೆಂಗಿನ ಮರ (d) ಮಾವಿನ ಮರ

5) ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಬೇಂದ್ರೆ ಆಶಿಸಿದ್ದಾರೆ?

(a) ಬಾಲ್ಯ (b) ಮುಪ್ಪು

(c) ಹರೆಯ (d) ಜೀವನ

6) ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?

(a) ಸೀತಾ (b) ನಿಶಾಶರ್ಮ

(c) ಪ್ಲೇವಿಯಾ (d) ಕಮಲಾಮೇಡಂ

7) ಕಾದು ಬತ್ತಿರುವ ಹೊಳೆಯಿಂದ ಹೂಳೆತ್ತಿ ತಂದು ತೆಂಗಿನ ತೋಟಕ್ಕೆ ಹಾಕಬೇಕೆಂದು ಧಣಿಗಳು ಕುದುಪನಿಗೆ ಸೂಚನೆ ನೀಡುತ್ತಿದ್ದರು. ಧಣಿಗಳ ಮಾತು ಚೆನ್ನಮ್ಮನ ಕಿವಿಗೂ ತಲುಪುತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ ಬುಗುಡಿಗೆ ಎಂಬಂತೆ ತಾನು ಧಣಿಗಳ ಮನೆಯ ಮುಸುರೆ ಪಾತ್ರೆ ತಿಕ್ಕುತ್ತಾ ಹೊಳೆಯ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತಿದ್ದಳು – ಈ ಸಾಲುಗಳಲ್ಲಿ ಕಾಣುವ ಚೆನ್ನಮ್ಮನ ಮನಸ್ಥಿತಿ .....................

(a) ಚೆನ್ನಮ್ಮನ ಅಸಹಾಯಕತೆ, ನೋವು (b) ಕುದುಪನ ಚಿಂತೆ

(c) ಕಿವಿ ಕೇಳಿಸುತ್ತಿಲ್ಲ (d) ಚೆನ್ನಮ್ಮನ ಅಹಂಕಾರ

8) ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?

(a) ಗೂಳೂರು ಮಠ (b) ಶೃಂಗೇರಿ ಮಠ

(c) ಸಿದ್ಧಗಂಗಾ ಮಠ (d) ಚುಂಚನಗಿರಿ ಮಠ

9) ಆನೆಯ ಮಾವುತನ ಹೆಸರೇನು?

(a) ತಿಪ್ಪಣ್ಣ (b) ಪುಟ್ಟಯ್ಯ

(c) ವೇಲಾಯುಧ (d) ಜಬ್ಬಾರ್

10) ''ಏನು ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲ ಒಂದು ದಿನ ಎಚ್ಚರ ತಪ್ಪಿದ್ರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂಗೇ ಅಲ್ವಾ'' – ಎಂದು ತನ್ನ ಕೆಲಸದ ಬಗ್ಗೆ ದುರ್ಗಪ್ಪ ಯಾವ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ?

(a) ಅಸಹನೆ (b) ಅಪಾಯಕಾರಿ

(c) ಅತೃಪ್ತಿ (d) ಅಸಮಾಧಾನ

(ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: (5 × 1 = 5)

(ಮನೋರಮೆ, ದ್ವೀಪಜೀವಿಗಳಾಗಿ, ಸಿಂಹಬಾಲದ ಕೋತಿ, ಚೆನ್ನೈ, ಚಹಾ, ಮುದ್ದಣ)

11) ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ..................

12) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು............... ಉಳಿಯುತ್ತಾರೆ.

13) ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ............ ನಲ್ಲಿದ್ದರು.

14) ಕನ್ನಡವು ಕಸ್ತೂರಿಯಲ್ಲವೇ! ಎಂದವರು .............

15) ಕಲಿಯುಗದ ಅಮೃತ................

(ಇ) ಹೊಂದಿಸಿ ಬರೆಯಿರಿ: (5 × 1 = 5)

16) ಜಾಲಿಯ ಮರದಂತೆ — ಅ) ಟಿ. ಯಲ್ಲಪ್ಪ

17) ಮುಂಬೈ ಜಾತಕ — ಆ) ಸುಕನ್ಯಾ ಮಾರುತಿ

18) ಶಿಲುಬೆ ಏರಿದ್ದಾನೆ — ಇ) ಜಿ.ಎಸ್. ಶಿವರುದ್ರಪ್ಪ

19) ಹತ್ತಿ... ಚಿತ್ತ... ಮತ್ತು.... — ಈ) ಕೆ.ಎಸ್. ನಿಸಾರ್ ಅಹಮದ್

20) ಒಮ್ಮೆ ನಗುತ್ತೇವೆ — ಉ) ಪುರಂದರ ದಾಸರು

ಊ) ಪುಲಿಗೆರೆ ಸೋಮನಾಥ

## ಆ–ವಿಭಾಗ

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: (3 × 2 = 6)

21) ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

22) ಜಾನಪದ ಗರತಿಯ ಪ್ರಕಾರ ಹಡೆದವ್ವನನ್ನು ಯಾವಾಗ ನೆನೆಯಬೇಕು?

23) ಬೆಳಕು ಬೇಟೆಗಾರ ಹೇಗೆ ಬರುತ್ತಾನೆ?

24) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(2 × 2 = 4)**

25) ಡಾ।। ಚಂದ್ರಪ್ಪ ಬಸಲಿಂಗನಿಗೆ ಡಾ।। ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

26) ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

27) ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

28) ಪಟ್ಟಣದ ಹೋಟೇಲಿನ ಕಟ್ಟಡ ಹೇಗಿದೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

29) ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದೇಕೆ?

30) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

31) ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

32) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ–ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(2 × 3 = 6)**

33) ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು.

34) ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು.

35) ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

36) ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

37) ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

38) ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

39) ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

## ಈ–ವಿಭಾಗ

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ : **(2 × 4 = 8)**

40) ಪ್ರಮದ ವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

41) ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

42) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

43) ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಸೋಮನಾಥ ಹೇಗೆ ವಿವರಿಸಿದ್ದಾನೆ?

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ: **(1 × 4 = 4)**

44) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

45) ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

46) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: **(1 × 4 = 4)**

47) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ? ವಿವರಿಸಿ.

48) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿ.

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ: **(4 × 2 = 8)**

49) ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.

ಗಟ್ಟಿಪಾದ, ಹಿತವಚನ, ಬೆಳ್ಳಿಲೋಟ

50) ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿ.

ಸೀತೆಯನ್ನು, ಕಾಲೇಜಿನಿಂದ, ಮುಖದಲ್ಲಿ

51) ಕೆಳಗಿನ ಎರಡು ಕ್ರಿಯಾಪದಗಳ ಧಾತು ಗುರುತಿಸಿ.

ಓದುವಳು, ಹಾಡುವನು, ಕುಣಿಯುತ್ತಿತ್ತು.

52) ಎರಡು ಕ್ರಿಯಾಪದಗಳ ಕಾಲವನ್ನು ಸೂಚಿಸಿ.

ಹೋದನು, ಕೇಳುತ್ತಾರೆ, ಕುಣಿಯುವರು.

53) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.

ದಾರಿದೀಪ, ತಲೆಬಾಗು, ಹಿತ್ತಾಳೆಕಿವಿ.

54) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

(ಆ) ಯಾವುದಾದರೂ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ: **(1 × 4 = 4)**

55) ಮತದಾನದ ಮಹತ್ವ

**ಅಥವಾ**

ಪುಸ್ತಕಗಳ ಮಹತ್ವ

(ಇ) ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ: **(1 × 4 = 4)**

(ಯಾವುದೇ ಪತ್ರ ಲೇಖನದಲ್ಲಿ ಹೆಸರು ನಮೂದಿಸಬಾರದು, ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾಹರಣೆಗೆ : ಅ.ಬ.ಕ)

56) ನಿಮಗೆ ಶೈಕ್ಷಣಿಕ ಸಾಲ ಸೌಲಭ್ಯವನ್ನು ಒದಗಿಸುವಂತೆ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ವಾರ್ಷಿಕೋತ್ಸವವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.